## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹುಣಸೂರು

ದಿನಾಂಕಃ 24 ನೇ ಜೂನ್ ತಿಂಗಳು 2026ರಂದು

**ಸಿಸಿ ನಂ.698/2025**

**ಫಿರ್ಯಾದುದಾರರುಃ** ಸರಕಾರ (ಹುಣಸೂರು ಪಟ್ಟಣ ಪೊಲೀಸರಿಂದ)

– ವಿರುದ್ಧ –

**ಆರೋಪಿಃ** ಕೃಷ್ಣೇಗೌಡ., ಬಿನ್ ರಾಮು, 42 ವರ್ಷ,
ವ್ಯಾಪಾರಸ್ಥರು, ವಾಸಃ ಡಿ.ನಂ.501,
ಸುಭಾಷ್ ನಗರ, ಹೆಬ್ಬಾಳ, 1ನೇ ಕ್ರಾಸ್,
ಮೈಸೂರು.

## ದೋಷಾರೋಪಣೆ

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಏನೆಂದರೆಃ

ದಿನಾಂಕಃ 06.07.2025ರಂದು ಸಂಜೆ 7.00 ಗಂಟೆ ಸಮಯದಲ್ಲಿ ಹುಣಸೂರು ಪಟ್ಟಣ ಪೊಲೀಸ್ ಠಾಣಾ ವ್ಯಾಪ್ತಿಯ ಮಡಿಕೇರಿ – ಮೈಸೂರು ಮುಖ್ಯ ರಸ್ತೆಯ ಕಲ್ಕುಣಿಕೆ ಸರ್ಕಲ್ ಕಡೆಯಿಂದ ಲಕ್ಷ್ಮಣ ತೀರ್ಥ ನದಿಯ ಹೊಸ ಸೇತುವೆ ಬಳಿ ಮೈಸೂರು ಕಡೆಗೆ ಇರುವ ರಸ್ತೆಯ ಎಡಭಾಗದಲ್ಲಿ ಚಾಸಾ.1ಇರ್ಫಾನ್.ಎಂ.ಬಿ., ಮತ್ತು ಚಾಸಾ.2 ಮೊಹಮದ್ ಸಿರಾಜುದ್ದೀನ್ ರವರು ನಡೆದುಕೊಂಡು ಬರುತ್ತಿರುವಾಗ ಆರೋಪಿಯಾದ ನೀವು ನಿಮ್ಮ ಕೆಎ–09/ಹೆಚ್ಡಿ–7732ರ ಹೊಂಡಾ ಡ್ರೀಮ್ ಯುಗ ಬೈಕ್ ನ್ನು ಮಡಿಕೇರಿ ಕಡೆಯಿಂದ ಅತಿವೇಗ ಮತ್ತು ಅಜಾಗರೂಕತೆಯಿಂದ ಮಾನವ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದಿರುತ್ತೀರಿ ಎಂದು ತನಿಖೆಯಿಂದ ದೃಢಪಟ್ಟಿದ್ದು, ಆದುದರಿಂದ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 281 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಮೇಲೆ ವಿವರಿಸಿದ ವಾಹನವನ್ನು ಮೇಲೆ ಹೇಳಿದ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ರಸ್ತೆಯ ಎಡಭಾಗದಲ್ಲಿ

ನಡೆದುಕೊಂಡು ಹೋಗುತ್ತಿದ್ದ ಚಾಸಾ.2ರವರಿಗೆ ಡಿಕ್ಕಿ ಮಾಡಿದ ಪರಿಣಾಮ ಚಾಸಾ.2ರವರ ಬಲ ಕಾಲಿಗೆ ತೀವ್ರ ಸ್ವರೂಪದ ಗಾಯಪಡಿಸಿರುತ್ತೀರಿ ಎಂದು ತನಿಖೆಯಿಂದ ದೃಢಪಟ್ಟಿದ್ದು, ಆದುದರಿಂದ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆಯ ಕಲಂ.125(ಬಿ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಾಣಿಸಿದ ಆರೋಪಣೆಯ ಬಗ್ಗೆ ನಿಮ್ಮನ್ನು ಈ ನ್ಯಾಯಾಲಯದ ಮುಂದೆ ವಿಚಾರಣೆಗೆ ಗುರಿಪಡಿಸುತ್ತೇನೆ ಎಂದು ಈ ಮೂಲಕ ಆಜ್ಞೆ ಮಾಡುತ್ತಿದ್ದೇನೆ.

Sd/-

(ಅನಿತ)

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದಂ., ಹುಣಸೂರು.**

ANITHA Digitally signed by ANITHA Date: 2026.06.24 17:52:58 +0530

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹುಣಸೂರು.**

**ಸಿಸಿ ನಂ.698/2025**

| | | |
|---|---|---|
| ಆಪಾದಿತನ ಹೆಸರು | : | ಕೃಷ್ಣೇಗೌಡ., |
| ತಂದೆಯ ಹೆಸರು | : | ಶಂಕರೇಗೌಡ, |
| ವಯಸ್ಸು | : | 42 ವರ್ಷ, |
| ಉದ್ಯೋಗ | : | ವ್ಯಾಪಾರಸ್ಥರು, |
| ವಾಸಸ್ಥಳ | : | ಡಿ.ನಂ.501,<br>ಸುಭಾಷ್ ನಗರ, ಹೆಬ್ಬಾಳ, 1ನೇ ಕ್ರಾಸ್,<br>ಮೈಸೂರು., |

**ಭಾರತೀಯ ನಾಗರೀಕಾ ಸುರಕ್ಷಾ ಸಂಹಿತೆಯ ಕಲಂ 234ರ ಅಡಿ ಆರೋಪಿಯ ಹೇಳಿಕೆ**

| | |
|---|---|
| ಪ್ರಶ್ನೆ 1 : | ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ? |
| ಉತ್ತರಃ | ತಿಳಿಯಿತು |
| ಪ್ರಶ್ನೆ 2 : | ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ? |
| ಉತ್ತರಃ | ತಪ್ಪು ಒಪ್ಪಿಕೊಳ್ಳುತ್ತೇನೆ. |

ಮೇಲ್ಕಾಣಿಸಿದ ಹೇಳಿಕೆಯನ್ನು ದಿನಾಂಕಃ 24.06.2026 ರಂದು ನನ್ನ ಉಪಸ್ಥಿತಿಯಲ್ಲಿ ಆರೋಪಿಯಿಂದ ಪಡೆಯಲಾಗಿದ್ದು, ಸದರಿ ಹೇಳಿಕೆಯು ಆರೋಪಿಯು ಕೊಟ್ಟ ನಿಜವಾದ ಹೇಳಿಕೆಯಾಗಿದೆ.

Sd/-
(ಅನಿತ)
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂ., ಹುಣಸೂರು.**

ANITHA Digitally signed by ANITHA
Date: 2026.06.24 17:53:03 +0530